ಹುಡುಕಿಕೊಂಡು ಒಂದಲ್ಲ ಒಂದು ಕೆಲಸವನ್ನು ಮಾಡುತ್ತಿದ್ದರು. ಯಾರೋ ಒಬ್ಬ ಲಹದ್‌ನ (ಶವಕ್ಕೆ ಸ್ನಾನ ಮಾಡಿಸುವ) ಗುಂಡಿಯನ್ನು ಅಗೆಸಿದ. ಮತ್ತೊಬ್ಬ ಮಸೀದಿಯಿಂದ ಹಲಗೆಗಳನ್ನು ತಂದು ಅದರ ಮೇಲೆ ಇಟ್ಟ. ಹೆಣದ ಅಂತ್ಯಕ್ರಿಯೆಯ ಕೆಲಸವೆಲ್ಲ ತ್ವರಿತಗತಿಯಲ್ಲಿ ನಡೆಯುತ್ತಿತ್ತು. ಶಾಮಿಯಾನದ ಒಳಗಡೆ ಯಾರೋ ಒಬ್ಬರು ಗ್ಯಾಸಿನ ಒಲೆಯ ಮೇಲೆ ತಾಮ್ರದ ಹಂಡೆಯನ್ನು ಇಟ್ಟು ನೀರು ಕಾಯಿಸುತ್ತಿದ್ದರು. ಒಲೆ ಯಾರ ಮನೆಯದೋ... ಹಂಡೆ ಯಾರ ಮನೆಯದೋ... ಇನ್ನು ಮನೆಯೊಳಗಿನಿಂದ ಹೆಣವನ್ನು ಎತ್ತಬೇಕಿತ್ತು. ಹೊರಗಡೆಯಿಂದ ನಾಲ್ಕೈದು ಮಂದಿ ಗಂಡಸರು ಒಳಬಂದರು. ಅಲ್ಲಿದ್ದ ಹೆಣ್ಣುಮಕ್ಕಳು ಎದ್ದು ನಿಂತು ಜಾಗ ಮಾಡಿದರು. ಆ ಮಹಿಳೆಯರೆಲ್ಲರೂ ತಮ್ಮ ಮೋರೆಯ ಮೇಲೆ ಹಿಜಾಬ್‌ನ ಕರಿ ತೆರೆಯನ್ನು ಇಳಿ ಬಿಟ್ಟರು. ಹಾಗೆ ಒಳ ಬಂದವರಲ್ಲಿ ಬಹುತೇಕ ಪುರುಷರು ಮೆಹೆಕ್‌ಳ ಹತ್ತಿರದ ಸಂಬಂಧಿಗಳಾಗಿದ್ದರು. ಆ ಪೈಕಿ ಅವಳ ಚಿಕ್ಕಪ್ಪ ಅಲ್ಲಿ ನಿಂತು ತನ್ನ ಅತ್ತಿಗೆ ಅಂದರೆ ಸಾಲಿಹಾ ಎಲ್ಲಿರುವಳೆಂದು ಹುಡುಕುತ್ತ ಕಣ್ಣಾಡಿಸಿದ.

ಒಳಗೆ ಬಂದ ಪುರುಷರ ಪೈಕಿ ಮೊಹಮ್ಮದ್ ಚಿಕ್ಕಪ್ಪ ಎಲ್ಲರಿಗಿಂತ ಮುಂದಿದ್ದ. ಅವನು ಅಲ್ಲೇ ನಿಂತು ಸಾಲಿಹಾಳತ್ತ ಕಣ್ಣು ಹಾಯಿಸುತ್ತಾ ನಿರ್ದಿಷ್ಟವಾಗಿ ಯಾರನ್ನೂ ಉದ್ದೇಶಿಸದೆ, ''ಈಗ ಜನಾಜವನ್ನು ಎತ್ತಲು ಅನುಮತಿ ಇದೆಯೇ?'' ಎಂದು ಕೇಳಿದ. ಯಾರೂ ಅದಕ್ಕೆ ಉತ್ತರ ಕೊಡಲಿಲ್ಲ. ಅಲ್ಲಿ ಸೇರಿದ್ದ ನಾಲ್ಕೈದು ಮಂದಿ ಶವವನ್ನು ಎತ್ತಿದರು. ಒಮ್ಮೆಲೇ ಎಲ್ಲರ ಆಕ್ರಂದನ ಮುಗಿಲು ಮುಟ್ಟಿತು. ಕಣ್ಣು ಮುಚ್ಚಿ ಗೋಡೆಗೆ ಒರಗಿದ್ದ ಸಾಲಿಹಾ ಇದೇನಾಗುತ್ತಿದೆ ಎಂದು ಒಮ್ಮೆ ಕಣ್ಣು ತೆರೆದು ನೋಡಿದಳು ಮತ್ತು ಕಣ್ಣು ಮುಚ್ಚಿಕೊಂಡಳು.

''ಇದೇನು ದರಿದ್ರ ನಿದ್ರೆ ಇವಳಿಗೆ'' ಎಂದು ಒಂದಿಬ್ಬರು ಒಳಗೊಳಗೇ ಅಂದುಕೊಂಡರು. ಇನ್ನು ಕೆಲವರು, ''ಪಾಪ ಯಾರಿಗೂ ಇಂತಹ ಕಷ್ಟ ಬರಕೂಡದು. ಆ ತಾಯಿಯ ಹೊಟ್ಟೆ ಎಷ್ಟು ಉರಿದು ಹೋಗುತ್ತಿದೆಯೋ?'' ಎಂದು ದುಃಖ ಪಟ್ಟರು. ಎಲ್ಲರಿಗೂ ಒಂದೇ ಪ್ರಶ್ನೆ ಸಾಲಿಹಾಳ ಕಣ್ಣು ಯಾಕೆ ಧುಮ್ಮಿಕ್ಕುತ್ತಿಲ್ಲ ಇವಳಿಗೆ ಏನಾಗಿದೆ?

ಫೈಜಾ ಮತ್ತೊಂದು ಲೋಟ ನೀರನ್ನು ಕೈಯಲ್ಲಿ ಹಿಡಿದು ಬಳಿ ಬಂದಳು. ಆ ನೀರಿನಲ್ಲಿ ಅವಳು ಒಂದಿಷ್ಟು ಸಕ್ಕರೆ ಮತ್ತು ಉಪ್ಪನ್ನು ಬೆರೆಸಿದ್ದಳು. ಒಂದು ಗುಟುಕು ನೀರನ್ನು ಕುಡಿದವಳೇ ಸಾಲಿಹಾ ಲೋಟವನ್ನು ತಳ್ಳಿದಳು. ಆದರೆ ಫೈಜಾ ಬಿಡಬೇಕಲ್ಲ, ''ಒಂದಿಷ್ಟು ನೀರಾದರೂ ಕುಡಿಯಿರಿ ಚಿಕ್ಕಮ್ಮ" ಎಂದು ಬಲವಂತವಾಗಿ ಆ ಲೋಟವನ್ನು ಅವಳ ಬಾಯಿಗಿಟ್ಟಳು. ಶತಮಾನಗಳ ಬಾಯಾರಿಕೆಯಿಂದ ಬಳಲುತ್ತಿದ್ದಂತೆ ಕಂಡ ಸಾಲಿಹಾ ಗಟಗಟನೆ ಆ ಉದ್ದನೆಯ ಲೋಟದ ಪೂರ್ತ ನೀರನ್ನು ಕುಡಿದಳು. ಗಂಟಲ ಪಸೆ ಆರಿದ ನಂತರ ಅವಳು ವಾಸ್ತವಕ್ಕೆ ಬರತೊಡಗಿದಳು. ಮೊದಲು ಮರಳಿ ಬಂದದ್ದು ಅವಳ ಶ್ರವಣ ಶಕ್ತಿ. ಮೆಹೆಕ್‌ಳನ್ನು ಮಲಗಿಸಿದ ಅಂಗಳದಲ್ಲಿ ಇದ್ದ ಚಾಪೆಗಳನ್ನು ಎತ್ತಿ ಬೇರೆ ಚಾಪೆಯನ್ನು ಹಾಸಿದ್ದರಿಂದ ಹಾಲ್‌ನಲ್ಲಿ ಮಹಿಳೆಯರು ಮತ್ತೆ ಬಂದು ಸೇರಿದರು. ಅವರು ಆಡುತ್ತಿದ್ದ ಮಾತುಗಳು ಕಿವಿಗೆ ಬೀಳುತ್ತಿದ್ದವು. ಅಷ್ಟೇ ಏಕೆ, ಅವರು ಆಡುತ್ತಿದ್ದ ಮಾತುಗಳು ಮತ್ತು ಮನಸ್ಸಿನಲ್ಲಿ ಮೂಡಿದ ಅಶಂಕೆಗಳನ್ನು ಕೂಡಾ ಅವಳು ಆಲಿಸಬಲ್ಲವಳಾಗಿದ್ದಳು. ಎಲ್ಲರ ಪ್ರಶ್ನೆಗಳೂ ತನ್ನ ಮಡಿಲಿನತ್ತ ತೂರಿ ಬರುತ್ತಿವೆ. ಇಲ್ಲದಿದ್ದಲ್ಲಿ ನನ್ನ ಮಡಿಲು ಹೀಗೆ ಭಾರವಾಗುತ್ತಿರಲಿಲ್ಲ. ನಾನೇನು ಮಾಡಿದೆ? ನಾನೇನು ಮಾಡಿದೆ?

ಅವಳ ಗ್ರಹಣ ಶಕ್ತಿ ಒಂದೊಂದಾಗಿ ಮರಳತೊಡಗಿತು. ಎದೆಯಲ್ಲಿ ಹೆಪ್ಪುಗಟ್ಟಿದ ಮಂಜು ಗಡ್ಡೆಯೊಂದು ಗಂಟಲಲ್ಲೇ ಸಿಲುಕಿಕೊಂಡಿತ್ತು. ಹೊರಗಡೆ ಶವಕ್ಕೆ ವಿಧ್ಯುಕ್ತವಾಗಿ ಸ್ನಾನ ಮಾಡಿಸುವ ಕೆಲಸ ಸಾಗಿತ್ತು. ಯಾರನ್ನೂ ಕಾಯುವ ಪ್ರಮೇಯವೇ ಇರಲಿಲ್ಲ. ಅವಳ ಕರಳು ಬಳ್ಳಿ ಎಲ್ಲವೂ ಅದೇ ಊರಿನಲ್ಲಿ ಕೇಂದ್ರಿತವಾಗಿತ್ತು. ಅಳಿದುಳಿದವರು ಸುದ್ದಿ ಸಿಕ್ಕೊಡನೆಯೇ ಅಕ್ಕಪಕ್ಕದ ಊರುಗಳಿಂದ